ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

7ನೇ ಫೆಬ್ರವರಿ 2014

**ಮಾನ್ಯಶ್ರೀ ಜಾರ್ಜ್ ರವರೇ,**

ಕಳೆದವಾರ ನಮ್ಮ ರಾಷ್ಟ್ರದ ರಾಜಧಾನಿಯಾಗಿರುವ ನವದೆಹಲಿಯ ಹೃದಯಭಾಗದಲ್ಲಿ, ಕೆಲ ವ್ಯಕ್ತಿಗಳ ಮಾರಣಾಂತಿಕ ಹಲ್ಲೆಯಿಂದ 19ರ ಹರೆಯದ ಯುವಕ ನಿಡೊ ಟಾನಿಯಮ್ ಸಾವನ್ನಪ್ಪಿದ ದುರ್ಘಟನೆಯ ಹಿನ್ನಲೆಯಲ್ಲಿ ನಾನು ನಿಮಗೆ ಈ ಪತ್ರವನ್ನು ಬರೆಯುತ್ತಿದ್ದೇನೆ. ದೆಹಲಿಯ ಘಟನೆಯು ಅತ್ಯಂತ ಹೇಯವಾದದ್ದಷ್ಟೆ ಅಲ್ಲದೆ ಮತ್ತೆಲ್ಲೂ ಮರುಕಳಿಸದಂತೆ ತಕ್ಷಣವೆ ಸೂಕ್ತವಾಗಿ ಸ್ಪಂದಿಸಲು ಎಚ್ಚರಿಕೆಯ ಗಂಟೆಯಾಗಿದೆ. ವರ್ಣಭೇಧ ದ್ವೇಷದಂತಹ ನೀಚ ಘಟನೆಗಳು ದೆಹಲಿಗೆ ಮಾತ್ರ ಸೀಮಿತವಾಗಿಲ್ಲ. ಬೆಂಗಳೂರಿನಲ್ಲೂ ಕೂಡ, ಈಶಾನ್ಯ ಭಾರತೀಯರೊಂದಿಗೆ - ಅವರ ವಿಭಿನ್ನ ಲಕ್ಷಣ, ಭಾಷೆ, ವೇಷ-ಭೂಷಣಗಳು, ಜೀವನಶೈಲಿಯನ್ನು ಕಂಡು, ಬೇರೆ ದೇಶದವರ ರೀತಿಯಲ್ಲಿ ಇಲ್ಲಿನವರೆ ಕೆಲವರು ವ್ಯವಹರಿಸುವುದನ್ನು ಕಂಡಿದ್ದೇನೆ.

ಜನಾಂಗೀಯ ಅಸಹಿಷ್ಣುತೆಗಳ ಇಂತಹ ಆಘಾತಕಾರಿ ಮನಸ್ಥಿತಿಗಳು ಇನ್ನೂ ಇರುವುದರಿಂದ ಮತ್ತು ನಮ್ಮ ರಾಜ್ಯದಲ್ಲಿ ಈ ಹಿಂದೆ ವರ್ಣಬೇಧದ ಘಟನೆಗಳು ಹಿಂದೆ ನಡೆದಿರುವುದರಿಂದಲೂ, ಇಂತಹ ಘಟನೆಗಳು ಮರಕಳಿಸದಿರಲು ಕೆಲವು ಕ್ರಮಗಳನ್ನು ನಾವು ತೆಗೆದುಕೊಳ್ಳುವುದು ಅವಶ್ಯಕವಾಗಿದೆ. ಕರ್ನಾಟಕ ಸರ್ಕಾರ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡು ರಾಜ್ಯವು ದೇಶದ ಮತ್ತು ವಿಶ್ವದ ಎಲ್ಲ ಜನರಿಗೂ ಸುರಕ್ಷಿತವಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು.

ಈ ಸಮಸ್ಯೆಯನ್ನು ಎದುರಿಸಲು ಈ ಕೆಳಗಿನ ಐದು ನಿರ್ದಿಷ್ಟ ಕ್ರಮಗಳು ಅಗತ್ಯವಾಗಿದೆ:

1. ಮೊಟ್ಟಮೊದಲನೆಯದಾಗಿ, ಜನಾಂಗೀಯ ತಾರತಮ್ಯದ ವಿರುದ್ಧ ಕಾನೂನು ರೂಪುಗೊಳ್ಳಬೇಕು. ಸರ್ಕಾರ ಇದಕ್ಕಾಗಿ ಈ ಕೂಡಲೇ ಕಾರ್ಯೋನ್ಮುಖವಾಗಬೇಕು ಮತ್ತು ವರ್ಣಬೇಧವನ್ನು ಕಿಂಚಿತ್ತೂ ಸಹಿಸಲಾಗುವುದಿಲ್ಲವೆಂಬ ಸ್ಪಷ್ಟ ಸಂದೇಶ ರವಾನೆಯಾಗಬೇಕು.

2. ಸರ್ಕಾರ ಪೊಲೀಸ್ ಇಲಾಖೆಗೆ, ಅದರಲ್ಲೂ ವಿಶೇಷವಾಗಿ ಭ್ರಷ್ಟಾಚಾರ, ತಾರತಮ್ಯ ಇತ್ಯಾದಿಗಳೊಂದಿಗೆ ನೇರ ಮುಖಾಮುಖಿಯಾಗುವ ಕೆಳಹಂತದ ಸಿಬ್ಬಂದಿಗಳಿಗೆ ಈ ಬಗ್ಗೆ ಜಾಗೃತಿ ಮತ್ತು ಸೂಕ್ಷ್ಮ-ಸಂವೇದನೆಗಳ ಬಗ್ಗೆ ಅರಿವು ಮೂಡಿಸಬೇಕು.

...2..

11ನೇ ಮಹಡಿ, ದೊಡ್ಡ ಗೋಪುರ, ಸರ್.ಎಂ.ವಿಶ್ವೇಶ್ವರಯ್ಯ ಕೇಂದ್ರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham:VU2RCL

सत्यमेव जयते



3. ಹಾಗೆಯೇ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿಯೂ ವಿಭಿನ್ನ ಸಾಂಸ್ಕೃತಿಕತೆಗಳ ಅರಿವು ಮೂಡಿಸುವುದರ ಜೊತೆಗೆ ಸಮಾನತೆಗೆ ಒತ್ತುಕೊಡುವ ವಿಷಯಗಳನ್ನು ಒಳಗೊಳ್ಳುವುದು ಅವಶ್ಯಕ. ಭಾರತದ ವಿಭಿನ್ನ ಸಾಂಸ್ಕೃತಿಕ ವಿಶೇಷತೆಗಳನ್ನು, ವಿವಿಧ ವರ್ಣ, ಭಾಷೆ, ವೇಷ-ಭೂಷಣಗಳು, ಜೀವನಶೈಲಿಗಳನ್ನು ಪರಿಚಯಿಸುವಂತಾಗಬೇಕು. ರಾಜ್ಯ ಸರ್ಕಾರ ತನ್ನ ಪಠ್ಯಕ್ರಮದಲ್ಲಿ ಇದನ್ನು ಅಳವಡಿಸಿಕೊಳ್ಳಬೇಕು.
4. ಮಕ್ಕಳ ಮನಸ್ಸಿನಲ್ಲಿ ಇತರ ರಾಜ್ಯದವರ ಬಗ್ಗೆ ಗೌರವ-ಸದ್ಭಾವನೆಗಳುಂಟಾಗುವಂತೆ ವಿಶೇಷವಾಗಿ ಪೋಷಕರು ಆಸ್ಥೆ ವಹಿಸಬೇಕು.
5. ಪ್ರಮುಖವಾಗಿ ರಾಜಕಾರಣಿಗಳು ಮತ್ತು ಮಾಧ್ಯಮಗಳು ಈಶಾನ್ಯ ಭಾರತದ ವಿಷಯಗಳತ್ತ ಗಮನಹರಿಸಿ, ಅಲ್ಲಿನ ಪ್ರದೇಶಗಳಿಗೆ ಭೇಟಿನೀಡಿ ಸಾಮಾಜಿಕ ಒಡನಾಟ ಹೊಂದುವ ಮೂಲಕ ಈಶಾನ್ಯ ಭಾರತದೊಂದಿಗೆ ನಿಕಟ ಸಂಪರ್ಕವನ್ನು ಬೆಳೆಸಿಕೊಳ್ಳಬೇಕು.

ಭಾರತದ ಯಾವುದೇ ಪ್ರದೇಶದಲ್ಲಿ ನೆಲೆಸಲು, ವಾಸಿಸುವ ಹಕ್ಕನ್ನು ಪ್ರತಿಯೊಬ್ಬ ಭಾರತೀಯನಿಗೂ ನಮ್ಮ ಸಂವಿಧಾನ ನೀಡಿದೆ. ಭಾರತ ಒಂದು ಮಹಾನ್ ರಾಷ್ಟ್ರ ಮತ್ತು ಈಶಾನ್ಯ ಭಾರತೀಯರೂ ಸೇರಿದಂತೆ ಸಮಸ್ತ ಭಾರತೀಯರು ಯಾವ ತಾರತಮ್ಯ, ಬೇಧ-ಭಾವದ ಹಂಗೂ ಇಲ್ಲದೆ ಎಲ್ಲಿ ಬೇಕಾದರು ಮುಕ್ತವಾಗಿ ನೆಲೆಸುವ ವಾತಾವರಣವಿರಬೇಕು.

ಕರ್ನಾಟಕದಲ್ಲಿ ಮತ್ತು ವಿಶೇಷವಾಗಿ ಬೆಂಗಳೂರಿನಲ್ಲಿ ಈಶಾನ್ಯ ಭಾರತೀಯರೊಂದಿಗೆ ಯಾವುದೇ ರೀತಿಯ ವರ್ಣಬೇಧ, ಜನಾಂಗೀಯ ತಾರತಮ್ಯಗಳಿಗೂ ಅವಕಾಶ ನೀಡದಂತೆ ರಾಜ್ಯಸರ್ಕಾರ ಅಗತ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಈ ಮೂಲಕ ತಮ್ಮನ್ನು ಒತ್ತಾಯಿಸುತ್ತಿದ್ದೇನೆ.

ಈ ಕುರಿತು ತಮ್ಮ ಪ್ರತಿಕ್ರಿಯೆಗಳನ್ನು ಎದುರುನೋಡುತ್ತಿದ್ದೇನೆ.

ತಮ್ಮ ವಿಶ್ವಾಸಿ,

**ರಾಜೀವ್ ಚಂದ್ರಶೇಖರ್**

**ಶ್ರೀ ಕೆ.ಜೆ.ಜಾರ್ಜ್**
ಮಾನ್ಯ ಗೃಹಸಚಿವರು,
ಕರ್ನಾಟಕ ಸರ್ಕಾರ,
ವಿಧಾನಸೌಧ, ಬೆಂಗಳೂರು.